ಮಲ್ಲಿಕಾರ್ಜುನ, ಸುರಧೇನುಪುರ

ಆಕಳಿಕೆ ಯಾವುದರ ಸಂಕೇತ?



ಅದು ನಿದ್ರಾದೇವಿಯು ಬರುತ್ತಿರುವಳೆಂದು ಸೂಚಿಸುವ ವೈಬ್ರೇಷನ್ ಮೋಡ್.

ಕಮಲಾ ರಾವ್

ನಾಡಿನ ಒಳಕ್ಕೆ ಬರೀ ಚಿರತೆಗಳೇ ಬರುತ್ತವಲ್ಲಾ, ಹುಲಿ, ಸಿಂಹ, ನರಿ ಏಕಿಲ್ಲ?

ಅಂಜುಬುರುಕರನ್ನು ತಮಗೆ ಹೋಲಿಸುವುದು ಹುಲಿ–ಸಿಂಹಕ್ಕೆ ಇಷ್ಟವಾಗಲಿಲ್ಲವಂತೆ. ನರಿಗಳು ನಮ್ಮಲ್ಲೇ ಸಾಕಷ್ಟಿವೆಯಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ಜನವರಿ 1 ಕುಡುಕರ ದಿನಾಚರಣೆಯೇ?

ಮಾಡಬಹುದಿತ್ತು. ಆದರೆ ಡಿಸೆಂಬರ್ 31ಕ್ಕೆ ಟೈಟ್ ಆದವರು ಏಳುವುದೇ ಜನವರಿ 2ಕ್ಕೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಬೆಂಗಳೂರಿನ ಬೀದಿನಾಯಿಗಳಿಗೆ ಚಿಕನ್ ರೈಸ್ ಭಾಗ್ಯ ಕಲ್ಪಿಸುವರಂತೆ. ನಾಟಿ ಕೋಳಿಯೋ, ಫಾರಂದೋ?



ಸುಳ್ಳು ಲೆಕ್ಕ ತೋರಿಸಿ ಹೆಚ್ಚು ಕಿಕ್‌ಬ್ಯಾಕ್ ಪಡೆಯಲು ನಾಟಿಯೇ ಸರಿಯೆಂದನಾ **naughty**.

ವಾಸಣ್ಣ, ಧಾರವಾಡ

ಜ್ಞಾನಿಗಳು, ವಿಜ್ಞಾನಿಗಳು ಕುಳಿತು ಮಾತಾಡಬೇಕಾದ ಜಾಗದಲ್ಲಿ ಅಜ್ಞಾನಿಗಳು ಕುಳಿತು ಕೊರೆಯುವರಲ್ಲ?

ನಮ್ಮದೇ ತಪ್ಪು. ನಾವು ಸದ್ದಿಗೆ ಕೊಡುವಷ್ಟು ಗಮನವನ್ನು ಸುದ್ದಿಗೆ ಕೊಡುವುದಿಲ್ಲ.

ಬಿ.ಆರ್. ಉಷಾ, ಅಮೆರಿಕ

ಧರ್ಮಪತ್ನಿ ಅಂತಾರೆ, ಧರ್ಮಪತಿ ಅನ್ನಲ್ಲ. ಯಾಕೆ?

'ಧರ್ಮ'ಕ್ಕೆ ಸಿಕ್ಕದೆ ಕನಿಷ್ಠ ವರೋಪಚಾರವನ್ನಾದರೂ ಪಡೆದಿರುತ್ತಾರಲ್ಲ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಪ್ರಸಿದ್ಧರಾಗಿದ್ದ ಟೀವಿ ಗುರುಗಳು ಕ್ರಮೇಣ ಮೂಲೆಗುಂಪಾಗಲು ಕಾರಣ?

ಟಿಆರ್‌ಪಿ ಎಂಬ ರಾಹುಕೇತುಗಳು ಉಂಟಾಗಿಸಿದ ಗ್ರಹಣದ ದುಷ್ಫಲವಂತೆ.

ರಾಜೇಶ್ವರಿ ಮಯ್ಯ, ಪುತ್ತೂರು

ಹಿರಿಯರನ್ನು ಅವರು ಇವರು ಎನ್ನುವ ನಾವು ದೇವನನ್ನೇಕೆ ಅವನು ಎಂದು ಕರೆಯುತ್ತೇವೆ?

'ಅಜ್ಜ ಬಾ' ಎನ್ನುವುದರಲ್ಲಿಯ ಸುಖ 'ಅಜ್ಜ ಬನ್ನಿ'ಯಲ್ಲಿಲ್ಲ. ದೇವ ಅಜ್ಜನಜ್ಜನಜ್ಜನಜ್ಜ... ನಜ್ಜನಜ್ಜ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಸತ್ತವರಿಗೆ ಟಿಕೆಟ್ ತೊಗೊಂಡ್ರು ಅಂತಾರಲ್ಲ, ಅವರಿಗೆ ಟಿಕೆಟ್ ಕೊಡುವವರು ಯಾರು?

ಕೆಲವರಿಗಂತೂ – ನರ್ಸಿಂಗ್ ಹೋಂ ವೈದ್ಯರು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಜೀವನ ಎಂಬ ಮೂರು ಅಕ್ಷರಗಳ ಪದದ ಅರ್ಥವೇನು?

ಜೀವನ=ನೀರು. ನೀರು ಪಾತ್ರೆಯಾಕಾರಕ್ಕೆ ಹೊಂದುವಂತೆ ಪರಿಸ್ಥಿತಿಗೆ ಹೊಂದಿಕೋ ಎಂಬುದೇ ಜೀವನದರ್ಥ.

ಷಣ್ಮುಖ ಎಸ್.ಹೆಚ್. ಹಳೇಬಾತಿ ಗ್ರಾಮ

ಭ್ರಷ್ಟಾಚಾರವಿಲ್ಲದ ಸಂಸ್ಥೆಯನ್ನು ಕಾಣಬೇಕು ಅಂದುಕೊಂಡಿರುವೆ. ನಿಮ್ಮ ಅಭಿಪ್ರಾಯ?

ಡೆನ್ಮಾರ್ಕ್ ವೀಸಾಗೆ ಅಪ್ಲೈ ಮಾಡಿ. ಅಲ್ಲಿನ ಕೆಲವು ಸಂಸ್ಥೆಗಳು ಲಂಚಮುಕ್ತ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕಾವ್ಯದಿಂದ ಕವಿಗೆ ಗೌರವವೋ, ಕವಿಯಿಂದ ಕಾವ್ಯಕ್ಕೆ ಗೌರವವೋ?

ಕಾವ್ಯ ಬುಗ್ಗೆ; ಕವಿ ಅದು ಹರಿಯುವ ದಾರಿಯಷ್ಟೆ. ಬುಗ್ಗೆಯಿರದೆ ಹರಿವಿಲ್ಲ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ನಿಮಗೆಂದಾದರೂ ಯಕ್ಷ ಸಿಕ್ಕಿದ್ದನೆ?

ಅವನ ಸಂತತಿಯವರು ಸಿಕ್ಕಿದ್ದಾರೆ. ಇಲ್ಲಿ ಪ್ರಶ್ನಿಸುವವರೆಲ್ಲ ಅವರೇ.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

ಕೃತಕ ಬುದ್ಧಿಮತ್ತೆ ಗಂಡೋ, ಹೆಣ್ಣೋ?

ಸ್ವಂತಿಕೆ ಇಲ್ಲ, ಅನುಸರಿಸುವುದು ಇತರರ ಮಾದರಿಯನ್ನು; ಎಂದಮೇಲೆ ಗಂಡೇ.

ಕಾಳೀಹುಂಡಿ ಶಿವಕುಮಾರ್, ಮೈಸೂರು

'ನಾನ್‌ವೆಜ್' ಸಿನಿಮಾ ಬಂದಿದೆ. ಮುಂದೆ 'ಪ್ಯೂರ್ ವೆಜ್', 'ಪಲಾವ್', 'ಗೀ ರೈಸ್' ಚಿತ್ರಗಳನ್ನು ತೆಗೆಯಬೇಕೆಂದಿದ್ದೇನೆ. ನಿಮ್ಮ ಸಲಹೆ?

ಜೋಕೆ! ನೀವು ಚಿತ್ರಾನ್ನ ಆಗುವ ಸಂಭವವಿದೆ.

ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

ಕೋತಿಗಳಿಗೆ ಮರಣದಿನ ತಿಳಿದು ತಮ್ಮ ಗುಂಡಿ ತಾವೇ ತೋಡಿಕೊಳ್ಳುತ್ತವಂತೆ. ಮನುಷ್ಯನಿಗೂ ಹಾಗೆ ತಿಳಿದರೆ?

ಮೊದಲು ಅವನಿಗಾಗದವರನ್ನು ಜೀವಂತವಾಗಿ ಹೂಳಲು ಗುಂಡಿ ತೋಡುತ್ತಾನೆ.

ಎನ್. ವೈದೇಹಿ, ಮೈಸೂರು

ಪುಟ್ಟ ಮೊಲವೊಂದು ಹೋಗಿ ಹುಣ್ಣಿಮೆ ಚಂದ್ರನಲ್ಲಿ ಕೂತಿದೆಯಲ್ಲ, ಏಕೆ?



ಬೇಟೆನಾಯಿಗಳಿಂದ ದೂರವಾಗಿ ಜಗದ ಬಚ್ಚೆ, ಬೇಟೆಗಳ ಕಣ್ಣಿಗೆ ಸಂತಸ ನೀಡಲು.

ಶೋಭಾ ಕುಮಾರಸ್ವಾಮಿ, ಬೆಂಗಳೂರು

ಇತ್ತೀಚೆಗೆ ಕನ್ನಡ ಸಿನಿಮಾಗಳಿಗೆ ಇಂಗ್ಲಿಷ್ ಹೆಸರು ಇಡುತ್ತಿರುವುದೇಕೆ?

ಕನ್ನಡದ ಪದಗಳನ್ನು ಮಾಧ್ಯಮಗಳು ಕೆಡಿಸುವುದನ್ನು ಕಂಡು ಕೆಟ್ಟರೆ ಪರಭಾಷೆಯೇ ಕೆಡಲಿ ಎಂದು.

ಅಜ್ಜಯ್ಯಮೂರ್ತಿ, ಮೊಳಕಾಲ್ಮೂರು

ಇಲ್ಲೊಬ್ಬ ನಾಯಕನು ಹಿಂಬಾಲಕರಿಗೆ 'ನಾ ಹೇಳಿದಂತೆ ಮಾಡಿ; ನಾ ಮಾಡಿದಂತೆ ಮಾಡಬೇಡಿ' ಎನ್ನುತ್ತಿದ್ದಾನಲ್ಲ?

ಓಹ್! ಆತ ವಯಸ್ಸಾಗಿ ಮಂಡಿ ಸವೆದಿರುವ ಡ್ಯಾನ್ಸ್ ಗುರು ಇರಬೇಕು.

■ **ರಾಮ್**